| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KARKALA.**

**Criminal Case No. 536/2024**

ಪಿಡ್ಯೂಃ 5 ಸಿಡ್ಲ್ಯೂಃ 5

ಸಾಕ್ಷಿದಾರನ ಹೆಸರು : ಹರೀಶ್ ಶೆಟ್ಟಿ
ತಂದೆಯ ಹೆಸರು : ಕೊರಗ ಶೆಟ್ಟಿ
ಪ್ರಾಯ : 39 ವರ್ಷ
ಉದ್ಯೋಗ : ಅಟೋ ಚಾಲಕ
ವಾಸ : ಮಾಳ

ದಿನಾಂಕ 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿಯನ್ನು ಇದಕ್ಕೂ ಮುಂಚೆ ನೋಡಿರುವುದಿಲ್ಲ.

ಚಾಸಾ-1 ರಿಂದ 4, 8 ರಿಂದ 11 ರವರ ಪರಿಚಯ ಇಲ್ಲ. ಚಾಸಾ-6 ಮತ್ತು 7 ಪರಿಚಯ ಇದೆ. ಅವರು ನಮ್ಮ ನೆರೆಕರೆಯವರು.

ಒಂದುವರೆ ವರ್ಷದ ಹಿಂದೆ ನಾನು ಮಾಳದಿಂದ ಬಜಗೋಳಿಗೆ ನನ್ನ ಅಟೋದಲ್ಲಿ ಹೋಗುತ್ತಿರುವಾಗ ಮಾಳಗ್ರಾಮದ ಕೂಡಬೆಟ್ಟು ಎಂಬಲ್ಲಿ ಅಪಘಾತ ಆಗಿತ್ತು. ಸದ್ರಿ ಅಪಘಾತವು ಬಸ್ಸು ಮರಕ್ಕೆ ಢಿಕ್ಕಿಹೊಡೆದು ಆಗಿರುತ್ತದೆ. ನಾನು ಬರುವ ಮುಂಚೆ ಅಪಘಾತ ಆಗಿರುತ್ತದೆ. ನಾನು ಬರುವ ಮುಂಚೆ ಅದರಲ್ಲಿದ್ದ ಗಾಯಾಳುಗಳನ್ನು ಆಸ್ಪತ್ರೆಗೆ

ಕರೆದುಕೊಂಡು ಹೋಗಿರುವುದಾಗಿ ಅಲ್ಲಿ ನೆರೆದ ಜನ ತಿಳಿಸಿರುತ್ತಾರೆ. ಈ ಅಪಘಾತಕ್ಕೆ ಏನು ಕಾರಣ ಎಂದು ಗೊತ್ತಿಲ್ಲ.

2. ಪೊಲೀಸರು ನನ್ನನ್ನು ಸ್ಥಳಮಹಜರಿಗೆ ಸಾಕ್ಷಿಯಾಗಿ ಬರಲು ಕೇಳಿಕೊಂಡಿರುತ್ತಾರೆ. ನನ್ನ ಸಮಕ್ಷಮ ಪೊಲೀಸರು ಮಹಜರು ಮಾಡಿರುವುದಿಲ್ಲ. ಆ ಸಮಯದಲ್ಲಿ ಸ್ಥಳದಲ್ಲಿ ತುಂಬಾ ಜನ ಇದ್ದರು. ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಪೊಲೀಸರು ದಾಖಲೆಗಳ ಮೇಲೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಮತ್ತು ಸ್ಥಳದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆ. ನಾನು ಈಗ ನೋಡಿದ ದಾಖಲೆಗಳಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ತಕ್ಷೀರು ಸ್ಥಳ ತನಿಖಾ ಮಹಜರು ಆಗಿದ್ದು ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮತ್ತೊಂದು ದಾಖಲೆಯು ನಕ್ಷೆಯಾಗಿದ್ದು ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದೇನೆ. ಸದ್ರಿ ಭಾವಚಿತ್ರವನ್ನು ನಿಪಿ-8 ಎಂದು ಗುರುತಿಸಲಾಯಿತು.

3. ಅಪಘಾತಕ್ಕೆ ಒಳಗಾದ ಬಸ್ಸಿನ ಭಾವಚಿತ್ರ ನೋಡಿದರೆ ಗುರುತಿಸಲು ಆಗುವುದಿಲ್ಲ. ಪೊಲೀಸರು ನನ್ನನ್ನು ಘಟನೆ ಬಗ್ಗೆ ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡಿರುವ ಬಗ್ಗೆ ನನಗೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ</u> <u>ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

4. ದಿಃ20.12.2023 ರಂದು ಸಂಜೆ 5.15 ಗಂಟೆಗೆ ನಾನು ಬಾಡಿಗೆಗೆ ಮಾಳಕ್ಕೆ ಪ್ರಯಾಣಿಕರನ್ನು ಬಿಡಲು ಹೋಗಿದ್ದು ವಾಪಸ್ಸು ರಿಕ್ಷಾ ನಿಲ್ದಾಣಕ್ಕೆ ಹೋಗುವಾಗ ಶೃಂಗೇರಿ ಬಜಗೋಳಿ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಹೋಗುತ್ತಿರುವಾಗ ಮಾಳ ಗ್ರಾಮದ

ಕೂಡಬೆಟ್ಟು ಎಂಬಲ್ಲಿ ತಲುಪಿದಾಗ ನನ್ನ ಮುಂದಿನಿಂದ ಅಂದರೆ ಮಾಳ ಕಡೆಯಿಂದ ಬಜಗೋಳಿ ಕಡೆಗೆ ಆರೋಪಿ ಕೆಎಸ್ ಆರ್ ಟಿ ಸಿ ಬಸ್ಸನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ರಸ್ತೆಯ ತೀರಾ ಬಲಭಾಗಕ್ಕೆ ಚಲಾಯಿಸಿಕೊಂಡು ಹೋಗಿ ರಸ್ತೆ ಪಕ್ಕದ ಮರಕ್ಕೆ ಢಿಕ್ಕಿಹೊಡೆದನ್ನು ಎಂದರೆ ನಾನು ನೋಡಿರುವುದಿಲ್ಲ. ಸದ್ರಿ ಅಪಘಾತದ ಪರಿಣಾಮ ಬಸ್ಸಿ ನಲ್ಲಿದ್ದ ಮಕ್ಕಳಿಗೆ ಸಣ್ಣಪುಟ್ಟ ಗಾಯವಾಗಿದೆ ಎಂದರೆ ನಾನು ಬರುವಾಗ ಅವರನ್ನು ಕರೆದುಕೊಂಡು ಹೋಗಿರುತ್ತಾರೆ.

ಈ ಅಪಘಾತಕ್ಕೆ ಆರೋಪಿಯ ಅತೀವೇಗ ಹಾಗೂ ಅಜಾಗರೂಕತೆಯ ಚಲಾನೆಯೇ ಕಾರಣ ಎಂದರೆ ಗೊತ್ತಿಲ್ಲ. ದಿಃ21.12.2023 ರಂದು ನಾನು ಘಟನ ಸ್ಥಳ ತೋರಿಸಿಕೊಟ್ಟಂತೆ ನನ್ನ ಹಾಗೂ ಚಾಸಾ-12 ಮತ್ತು 13 ರವರ ಸಮಕ್ಷಮ ಪೊಲೀಸರು ಕಾರ್ಕಳ ತಾಲೂಕಿನ ಕೂಡಬೆಟ್ಟು ಎಂಬಲ್ಲಿ ಸ್ಥಳ ಮಹಜರು ಮಾಡಿ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಸ್ವಾ ಧೀನಪಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಮಹಜರು ಮತ್ತ ನಕ್ಷೆಗೆ ನನ್ನ ಸಹಿಯನ್ನು ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ದಿಃ 21.12.2023 ರಂದು ಹೇಳಿಕೆ ಪಡೆದುಕೊಂಡಿರುತ್ತಾರೆ ಎಂದರೆ ನೆನಪಿಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ ಏನು ಇಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ